(6ನೇ ಪುಟದಿಂದ)

ಇದು ಚಿಂಗಾರ ಜಲಪಾತ. ಸ್ಥಳೀಯರು ಇಟ್ಟ ಹೆಸರಿದು. ಸುಮಾರು 60–70 ಅಡಿಗಳಷ್ಟು ಅಗಲದಲ್ಲಿ ಮೂರ್ನಾಲ್ಕು ಹಂತಗಳಲ್ಲಿ 150 ಅಡಿಗಳಷ್ಟು ಆಳಕ್ಕೆ ಜಿಗಿದು ಹಿಮದ ಮೋಡವೆಬ್ಬಿಸಿ ಕ್ಷೀರ ಸಾಗರದ ತೆರೆಯಾಗಿ ಹರಿಯುತ್ತ ಹರಿದು ದೂರದೂರಕ್ಕೆ ಸಾಗುತ್ತದೆ.

ಕೊಡಗಿನ ಜಲಪಾತಗಳ ಸೊಬಗು ಸವಿಯಲು ಕಠಿಣ ಹಾದಿಯ ಚಾರಣವನ್ನೇ ಕೈಗೊಳ್ಳಬೇಕು. ಅಂತಹ ಒಂದು ಅಜ್ಞಾತ ಜಲಪಾತ ಚಿಂಗಾರ ಜಲಪಾತ. ಈ ಅಪರೂಪದ ಜಲಪಾತವನ್ನು ವೀಕ್ಷಿಸಬೇಕಾದರೆ ಮಡಿಕೇರಿಯತ್ತ ಹೆಜ್ಜೆ ಹಾಕಿ. ಕೊಡಗು ಜಿಲ್ಲೆಯ ಮಡಿಕೇರಿ ತಾಲೂಕಿನ ಯವಕಪಾಡಿ ಗ್ರಾಮದಲ್ಲಿರುವ ಚಿಂಗಾರ ಬಲು ಅಪರೂಪದ ಜಲಪಾತ. ಸ್ಥಳೀಯರಿಗೇ ಈ ಜಲಪಾತದ ಅರಿವಿಲ್ಲ. ಕೊಡಗಿನ ಪ್ರವಾಸಿ ನಕ್ಷೆಯಲ್ಲಿ ಇದರ ಹೆಸರಿಲ್ಲ. ಆದರೆ ಭೂರಮೆಯನ್ನು ಶೃಂಗರಿಸುವಲ್ಲಿ ಚಿಂಗಾರದ ಪಾತ್ರ ಹಿರಿದು.

ನಾಪೋಕ್ಲು–ವಿರಾಜಪೇಟೆ ಮುಖ್ಯರಸ್ತೆಯಿಂದ ಯವಕಪಾಡಿ ಬಸ್ ತಂಗುದಾಣದಲ್ಲಿ ಇಳಿದು ಬಲಭಾಗದ ರಸ್ತೆಯಲ್ಲಿ ಪಯಣಿಸಿದರೆ ಪ್ರಸಿದ್ಧ ತಾಮರ ರೆಸಾರ್ಟ್ ತಲುಪಬಹುದು. ಉದ್ದಕ್ಕೂ ಹಾಸಿದ ಕಾಂಕ್ರೀಟ್ ರಸ್ತೆ ಪ್ರವಾಸಿಗರನ್ನು ಕೊಂಡೊಯ್ಯುವುದು ತಾಮರ ರೆಸಾರ್ಟ್‌ಗೆ. ಈ ರಸ್ತೆಯಲ್ಲಿ 1.5 ಕಿ.ಮೀ. ಸಾಗಿ ಎಡಕ್ಕೆ ಕವಲೊಡೆದ ರಸ್ತೆಯಲ್ಲಿ ಎತ್ತರಕ್ಕೇರಿದರೆ ಕಬ್ಬಿನಕಾಡು ತಲುಪಬಹುದು. ಕಬ್ಬಿನಕಾಡು ಹನಿವ್ಯಾಲಿ ರೆಸಾರ್ಟ್‌ನ ಮಾಲೀಕರಾದ ಅಪ್ಪಾರಂಡ ಸುರೇಶ್‌ಚೆಂಗಪ್ಪ ಅವರ ಖಾಸಗಿ ಜಾಗಕ್ಕೆ ಚಿಂಗಾರ ಜಲಪಾತ ಸೇರಿದೆ.

ಚಿಂಗಾರದ ವೀಕ್ಷಣೆ ಸುಲಭವೇನಲ್ಲ. ಹನಿವ್ಯಾಲಿ ಹಾದಿಯಲ್ಲಿ ಚಿಂಗಾರ ಹರಿದಿದ್ದರೂ ಅದರ ವೀಕ್ಷಣೆಗೆ ಹನಿವ್ಯಾಲಿ ಮಾಲೀಕರ ಸಹಕಾರ ಬೇಕು. ಏರು ರಸ್ತೆಯಲ್ಲಿ ಉದ್ದಕ್ಕೂ ಸಾಗಿದರೆ ಹನಿ ವ್ಯಾಲಿಯ ಹೋಂ ಸ್ಟೇ ಚಿಂಗಾರ ತಲುಪಬಹುದು. ಈ ಹೋಂ ಸ್ಟೇಗೆ ಬರುವ ಪ್ರವಾಸಿಗರಿಗೆ ಹಾಗೂ ವಿದೇಶಿ ಪ್ರವಾಸಿಗರಿಗೆ ಚಿಂಗಾರದ ಸೊಬಗು ಕಾಣ ಸಿಗುತ್ತದೆ. ಕಲ್ಲು ಹಾಸಿನ ಹಾದಿ. ನಡೆದು ಸಾಗುವುದು ಸುಲಭವಲ್ಲ.

ಹನಿ ವ್ಯಾಲಿಯ ಫೋರ್‌ವೀಲ್ ಜೀಪಿನಲ್ಲಿ ಏರಿ ಏರುದಾರಿಯಲ್ಲಿ ಸಾಗುವಾಗಲೇ ಸಾಗುವ ದಾರಿಯಲ್ಲಿ ಜಲಪಾತದ ಸನಿಹಕ್ಕೆ ಇಳಿದು ಓಡಿಬಿಡುವ ಮನಸ್ಸಾಗುತ್ತದೆ. ಅಷ್ಟೊಂದು ಸೌಂದರ್ಯವನ್ನು ಚಿಂಗಾರ ಮೇಳೈಸಿಕೊಂಡಿದೆ. ಹಂತಹಂತವಾಗಿ ಬೇರೆ ಬೇರೆ ಧಾರೆಗಳಲ್ಲಿ ಧುಮುಕುವ ಜಲಧಾರೆಯ ತಳಭಾಗದಲ್ಲಿ ಸೌಂದರ್ಯವನ್ನು ಮನಸ್ಸು ತಣಿಯುವಷ್ಟು ಆಸ್ವಾದಿಸಬಹುದು. ಇನ್ನೂ ತಳಭಾಗಕ್ಕೆ ಜಲಪಾತ ಹರಿಯುವ ಕಣಿವೆ.

